ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು : "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ``1999ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಧನ ವಿನಿಯೋಗ (ಸಂಖ್ಯೆ 3) ವಿಧೇಯಕ, 1999 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು ; "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ತೆರಿಗೆ ಕಾನೂನುಗಳು (ಮೂರನೇ ತಿದ್ದುಪಡಿ) ವಿಧೇಯಕ, 1999

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ತೆರಿಗೆ ಕಾನೂನುಗಳು (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು